ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಏಪ್ರಿಲ್ 2025 ಮಾಸ ಪತ್ರಿಕೆ

ಸಂಪುಟ/Volume : 47
ಸಂಚಿಕೆ/Issue : 07
ಪುಟ/Pages : 12
ಬೆಲೆ/Price : ₹ 15/–

**Akhila Karnataka Shikshaka Samachar | April 2025 | Monthly**

## ದಯವೇ ಧರ್ಮದ ಮೂಲವಯ್ಯ

## ಭಕ್ತಿ ಭಂಡಾರಿ ವಿಶ್ವಗುರು

# ಬಸವಣ್ಣ





## ಎಲ್ಲರಿಗೂ ಅಕ್ಷಯ ತೃತೀಯಾ ಹಬ್ಬದ ಶುಭಾಶಯಗಳು

A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

ಆತ್ಮೀಯರೇ

ಚೈತ್ರ ಮಾಸದ ನವಮಿಯಂದು ಪ್ರಭು ಶ್ರೀ ರಾಮಚಂದ್ರನ ಜನನದ ದಿನ. ಶ್ರೀರಾಮ ನವಮಿಯನ್ನು ಇಡೀ ದೇಶದಾದ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸುವರು. ಅಯೋಧ್ಯೆಯ ಶ್ರೀ ರಾಮನ ದರ್ಶನದ ಭಾಗ್ಯವೇ ಒಂದು ಸುಕೃತ. ಯಾರು ದರ್ಶನ ಮಾಡಿರುವಿರೋ, ಅವರೆಲ್ಲಾ ಧನ್ಯರು, ಉಳಿದವರು ಈ ಬೇಸಿಗೆ ರಜೆಯಲ್ಲಿ ದರ್ಶನ ಮಾಡುವ ಪ್ರಯತ್ನ ಮಾಡಿ. ದೇಶ ಸುತ್ತು, ಕೋಶ ಓದು, ಎಂಬ ನಾಣ್ಣುಡಿಯಂತೆ ಪ್ರವಾಸದಿಂದ ಸಾಕಷ್ಟು ಜ್ಞಾನವನ್ನು ಪಡೆದುಕೊಳ್ಳಲು ಸಾಧ್ಯವಾಗುವುದು.

ನಮ್ಮ ಸಂವಿಧಾನ ಶಿಲ್ಪಿ ಎಂದೇ ಪ್ರಸಿದ್ಧರಾದ ಡಾ|| ಬಿ. ಆರ್.ಅಂಬೇಡ್ಕರರ ಜನ್ಮದಿನ ಏಪ್ರಿಲ್ 14. ನಮ್ಮ ಭಾರತದ ಸಂವಿಧಾನ ರಚನೆಯಲ್ಲಿ ಹಲವರ ಪಾತ್ರವಿದ್ದರೂ, ಪ್ರಮುಖವಾಗಿ ಕಾರ್ಯನಿರ್ವಹಿಸಿ, ಸಂಸತ್ತಿನಲ್ಲಿ ಅಂಗೀಕಾರವನ್ನು ಪಡೆಯಲು ಯಶಸ್ವಿಯಾದವರು ಅಂಬೇಡ್ಕರರು. ಈ ಸಂವಿಧಾನದ ತಳಹದಿಯಲ್ಲಿಯೇ ಇಂದು ಭಾರತದ ಪ್ರಜಾಪ್ರಭುತ್ವವು ಸಾಗುತ್ತಿದೆ. ಈ ಸುಸಂದರ್ಭದಲ್ಲಿ ಈ ದೇಶಭಕ್ತನನ್ನು ಸ್ಮರಿಸುವುದು ಸೂಕ್ತ ತಾನೇ?

12ನೇ ಶತಮಾನದ ಸಮಾಜ ಸುಧಾರಕ ಭಕ್ತಿ ಭಂಡಾರಿ ಬಸವಣ್ಣನವರು. ಇವರು ಹಿಂದೂ ಕನ್ನಡ ಕವಿ ಮತ್ತು ತತ್ವಜ್ಞಾನಿಯಾಗಿದ್ದರು. ಜಾತಿಭೇದವನ್ನು ಎಣಿಸದೆ ಸಮಾಜದಲ್ಲಿ ಸಾಮರಸ್ಯವನ್ನು ಮೂಡಿಸಲು ಎಷ್ಟೇ ವಿರೋಧ ಬಂದರೂ ಲೆಕ್ಕಿಸದೆ ತಮ್ಮ ಕಾರ್ಯವನ್ನು ಪೂರ್ಣಗೊಳಿಸುವಲ್ಲಿ ಯಶಸ್ವಿಯಾದವರು. ಬಸವಣ್ಣನವರ ವಚನಗಳೆಂದರೆ ಸುಪ್ರಸಿದ್ಧ. "ಕಳಬೇಡ, ಕೊಲಬೇಡ, ಹುಸಿಯನುಡಿಯಲು ಬೇಡ, ಮುನಿಯಬೇಡ, ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮದೇವನೊಲಿಸುವ ಪರಿ" ಎಂಬ ಈ ರೀತಿಯ ಹಲವಾರು ವಚನಗಳಿಂದ ಸಮಾಜದ ಸುಧಾರಣೆಯ ಕಾರ್ಯನಿರ್ವಹಿಸಿದ ಮಹಾತ್ಮರು.

ಹಿಂದುಗಳ ಪ್ರಮುಖ ಹಬ್ಬಗಳಲ್ಲಿ ಅಕ್ಷಯ ತೃತೀಯವು ಮಹತ್ವಪೂರ್ಣವಾದದ್ದು, ಈ ದಿನ ಅತ್ಯಂತ ಮಂಗಳಕರವಾದ ದಿನವೆಂದು ನಂಬಿಕೆ. ಪಾಂಡವರು ವನವಾಸದಲ್ಲಿ ಹಸಿವಿನಿಂದ ಬಳಲುತ್ತಿದ್ದಾಗ, ಶ್ರೀಕೃಷ್ಣನು ದ್ರೌಪದಿಗೆ ಅಕ್ಷಯಪಾತ್ರೆಯನ್ನು ಕರುಣಿಸಿದ. ಅದರ ಮೂಲಕ ಪಾಂಡವರು ತಮ್ಮ ಹಸಿವನ್ನು ನೀಗಿಸಿಕೊಂಡರು ಎಂಬ ಪ್ರತೀತಿ ಇದೆ. ಈ ಶುಭದಿನದಂದು ಯಾವುದೇ ವಸ್ತುಗಳನ್ನು ನಾವು ಕೊಂಡರೆ ಹಾಗೆಯೇ ಅಕ್ಷಯವಾಗಿ ಸಮೃದ್ಧಿಯಾಗುತ್ತದೆ ಎಂಬ ಆಶಾಭಾವನೆಯು ಜನಮಾನಸದಲ್ಲಿದೆ.

2024-25ರ ಶೈಕ್ಷಣಿಕ ವರ್ಷದ ಪಿಯುಸಿ ಮತ್ತು ಎಸ್ಎಸ್ಎಲ್ಸಿ ಪಬ್ಲಿಕ್ ಪರೀಕ್ಷೆಗಳು ಮುಕ್ತಾಯವಾಗಿವೆ. ವಿದ್ಯಾರ್ಥಿಗಳು ಪರೀಕ್ಷೆಗಾಗಿ ಪೂರ್ಣ ಪ್ರಮಾಣದ ಸಿದ್ಧತೆಯನ್ನು ಮಾಡಿ, ಪರೀಕ್ಷೆಗಳನ್ನು ಸಂಪನ್ನಗೊಳಿಸಿ, ಫಲಿತಾಂಶಕ್ಕಾಗಿ ಎದುರು ನೋಡುತ್ತಿದ್ದರೆ, ಶಿಕ್ಷಕರು ಮೌಲ್ಯಮಾಪನ ಪ್ರಕ್ರಿಯೆಗಾಗಿ ಸಿದ್ಧತೆ ಯಾಗುತ್ತಿದ್ದಾರೆ. ನಿಮ್ಮ ಶಾಲೆಯ ಫಲಿತಾಂಶವು ಉತ್ತಮವಾಗಿ ಮೂಡಿಬರಲೆಂದು ಮಾಧ್ಯಮಿಕ ಶಿಕ್ಷಕ ಸಂಘವು ಶುಭವನ್ನು ಕೋರುತ್ತದೆ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ರಾಮರಾಜ್ಯ ಇಂದಿನ ಅಗತ್ಯತೆ
  – ಹೆಚ್. ನಾಗಭೂಷಣ್ ರಾವ್ 3
- ಅಂಬೇಡ್ಕರರ ಸಂದೇಶಗಳು, ಮೂಲದಂತೆ ಸಮಾಜವನ್ನು ಮುಟ್ಟಬೇಕು!
  – ಡಾ. ಸುಧಾಕರ ಹೊಸಳ್ಳಿ 4
- ಬೇಸಿಗೆಯ ರಜೆ ಮಕ್ಕಳಿಗೆ ಸಜೆ ಆಗದೆ, ಮಜಾ ಆಗಲಿ
  – ಪ್ರಹ್ಲಾದ್ ವಾ ಪತ್ತಾರ 6
- ಭಕ್ತಿ ಭಂಡಾರಿ ವಿಶ್ವಗುರು ಬಸವಣ್ಣ
  – ಜನಮೇಜಯ ಉಮರ್ಜಿ 8
- ಯುಗಾದಿ ಹೊಸ ವರ್ಷಕ್ಕೆ ನಮ್ಮ ಸಂಕಲ್ಪ
  – ಹೆಚ್. ನಾಗಭೂಷಣ್ ರಾವ್ 9
- ಶ್ರೇಷ್ಠ ಭ್ರಾತೃ-ಲಕ್ಷ್ಮಣ
  – ಸ್ವಾಮಿ ಹರ್ಷಾನಂದರು 11
- ಚಿತ್ರಸುದ್ದಿ 12

# ಶ್ರೇಷ್ಠ ಭ್ರಾತೃ–ಲಕ್ಷ್ಮಣ



ರಾಮನೊಬ್ಬನನ್ನುಳಿದು ಇನ್ನು ಯಾರಿಗಾಗಿಯೂ ಬದುಕದ ವ್ಯಕ್ತಿ ರಾಮಾಯಣದಲ್ಲಿದ್ದರೆ ಅವನೇ ಲಕ್ಷ್ಮಣ. ಬಹುಕಾಲ ರಾಮನನ್ನು ಪ್ರೀತಿಯಿಂದ ಸೇವೆ ಮಾಡಿದ ಶ್ರೇಷ್ಠ, ಅತ್ಯುತ್ತಮ ವ್ಯಕ್ತಿ ಅವನು. ಬಾಲ್ಯದಿಂದಲೂ ಅವನು ರಾಮನ ಪ್ರೀತಿಯಿಂದ ಬಂಧಿತನಾಗಿದ್ದವನು. ರಾಮನೂ ಅಷ್ಟೇ ಗಾಢವಾದ ಅವನ ಪ್ರೀತಿಯಿಂದ ಬಂಧಿತನಾಗಿದ್ದನು.

ಲಕ್ಷ್ಮಣನು ಮುಂಗೋಪದ ಸ್ವಭಾವದವನೆ? ಧರ್ಮವೆಂದರೆ ಉಪೇಕ್ಷೆಯಿಂದಿದ್ದ ಆಜ್ಞೇಯತಾವಾದಿಯೇ? ತನ್ನ ತಂದೆಯನ್ನೇ ತುಚ್ಛೀಕರಿಸಿದ ಹೃದಯಹೀನ, ಅವಿಧೇಯ ಪುತ್ರನೆ? ಸಂಶಯ ಸ್ವಭಾವದವನೆ? ಬದುಕಿನಲ್ಲಿ ಅವನ ಸಾಧನೆಗಳೇನು? ಅವನದು ವ್ಯರ್ಥ ಜೀವನವೆ?

ರಾಮನ ಮೇಲೆ ಅವನಿಗಿದ್ದ ಪ್ರಗಾಢವಾದ ಪ್ರೇಮದ ಆಳವನ್ನು ಅರಿಯದವರಿಗೆ ಈ ವಿವರಣೆ, ಈ ದುರ್ಗುಣಗಳ ಆರೋಪಣೆ, ಅವನಿಗೆ ಯೋಗ್ಯವಾದವು ಅನ್ನಿಸಬಹುದು. ಅವನ ಜೀವನದ ಏಕಮಾತ್ರ ಧ್ಯೇಯ, ಪರಮ ಪುರುಷಾರ್ಥ, ರಾಮನನ್ನು ಸುಖವಾಗಿರಿಸುವುದೇ ಆಗಿದ್ದಿತು. ಅವನು ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಜೀವನದುದ್ದಕ್ಕೂ ಯಾವ ಸೇವೆಗೇ ಆದರೂ ಸಿದ್ಧನಾಗಿರುತ್ತಿದ್ದನು.

ರಾಮನೊಂದಿಗೆ ಕಾಡಿಗೆ ಹೋಗೆಂದು ಅವನಿಗೆ ಯಾರೂ ಹೇಳಿರಲಿಲ್ಲ. ಆದರೆ ರಾಮನು ಸಿದ್ಧವಾಗುವುದಕ್ಕಿಂತ ಮೊದಲೇ ಅವನು ಸಿದ್ಧನಾಗಿದ್ದ! ಅವನು ಕಾಡಿನಲ್ಲಿ ಮುನ್ನಡೆಯುತ್ತ ರಾಮನಿಗೆ ದಾರಿ ಬಿಡಿಸಿಕೊಡುತ್ತಿದ್ದ. ರಾಮ ಸೀತೆಯರ ವಾಸಕ್ಕಾಗಿ ಅವನು ಗುಡಿಸಲುಗಳನ್ನು ನಿರ್ಮಿಸಿಕೊಡುತ್ತಿದ್ದ. ಆಹಾರ ತಯಾರಿಸುವುದಕ್ಕೆ ಅಗತ್ಯವಾದ ವಸ್ತುಗಳನ್ನು ಸಂಗ್ರಹಿಸಿ ತಂದು ತಾನೇ ಅಡುಗೆ ಮಾಡಿ ಬಡಿಸುತ್ತಿದ್ದ. ಅವರು ವಿಶ್ರಾಂತಿ ತೆಗೆದುಕೊಳ್ಳುವಾಗ, ನಿದ್ರಿಸುತ್ತಿರುವಾಗ ಕಾವಲು ಕಾಯುತ್ತಾ ನಿಲ್ಲುತ್ತಿದ್ದ. ಪಂಚವಟಿಯಲ್ಲಿ ಅವನು ಕಟ್ಟಿದ ಗುಡಿಸಲು ರಾಮನ ಮನಸ್ಸನ್ನು ಎಷ್ಟೊಂದು ಸಂತೋಷಪಡಿಸಿತೆಂದರೆ, ಅವನು ಲಕ್ಷ್ಮಣನಲ್ಲಿ ತನ್ನ ತಂದೆಯ ಪ್ರೀತಿಯನ್ನೇ ಕಾಣುವಂತಾಯಿತು.

ಭರತನು ಚಿತ್ರಕೂಟಕ್ಕೆ ತನ್ನ ದೊಡ್ಡ ಸೇನೆ, ಪರಿವಾರವನ್ನು ಕರೆದುಕೊಂಡು ಬಂದಾಗ ರಾಮನಿಗೆ ಆತನಿಂದ ಏನಾದರೂ ತೊಂದರೆ ಬರಬಹುದೇ ಎಂಬ ಸಂದೇಹದಿಂದ ಕೋಪಾವಿಷ್ಟನಾದ ಲಕ್ಷ್ಮಣ. ಆದರೆ ಅವನ ಸದುದ್ದೇಶವನ್ನು ಮನಗಂಡಾಗ ಅವನಿಗೆ ನಾಚಿಕೆಯಾಯಿತು; ಪ್ರೇಮದ ಭರದಿಂದ ಅವನು ಕರಗಿಹೋದ.

ಸ್ತ್ರೀಯರನ್ನು ಕೊಲ್ಲುವುದು ಮಹಾಪಾಪವೆಂಬ ಕಾರಣದಿಂದ ರಾಕ್ಷಸಿಯಾದರೂ ಸ್ತ್ರೀಯಾದ ತಾಟಕಿಯನ್ನು ಕೊಲ್ಲಲು ರಾಮನು ಹಿಂಜರಿದ. ಆದರೆ ರಾಮನ ಆಣತಿ ಇದ್ದುದರಿಂದ ಲಕ್ಷ್ಮಣ ಶೂರ್ಪನಖಿಯನ್ನು ಶಿಕ್ಷಿಸುವಾಗ ಸ್ವಲ್ಪವೂ ಹಿಂದೆ ಮುಂದೆ ನೋಡಲಿಲ್ಲ. ಅವನ ಕರ್ತವ್ಯ ಕೇವಲ ರಾಮನ ಆಣತಿಯಂತೆ ನಡೆಯುವುದೇ ಆಗಿತ್ತು!

ಲಕ್ಷ್ಮಣ ತುಂಬ ಬುದ್ಧಿವಂತ, ವಿಚಾರಪರ. ಬಂಗಾರದ ಜಿಂಕೆಯ ಹಿಂದೆ ಇದ್ದ ರಾಕ್ಷಸರ ಮೋಸವನ್ನೂ, ಮಾಯೆಯನ್ನೂ ಸುಲಭವಾಗಿ ಕಂಡುಕೊಳ್ಳುವುದು ಅವನಿಗೆ ಸಾಧ್ಯವಾಯಿತು. ಈ ಬಗ್ಗೆ ಅವನು ರಾಮಸೀತೆಯರನ್ನು ಎಚ್ಚರಿಸಿದ. ಏನು ನಡೆಯಿತೋ ಅದನ್ನು ತಡೆಯುವುದರಲ್ಲಿ ಅವನು ಯಶಸ್ವಿಯಾಗಲಿಲ್ಲ.

ಸೀತೆ ಅವನನ್ನು ಕಟುವಾಗಿ ಟೀಕಿಸಿದಾಗ, ಅವನು ರಾಮನ ಸಹಾಯಕ್ಕೆ ಹೋಗದಿದ್ದರೆ ತಾನು ಆತ್ಮಹತ್ಯೆ ಮಾಡಿಕೊಳ್ಳುವೆನೆಂದು ಹೆದರಿಸಿದಾಗ (ಜಿಂಕೆಯು ಹತವಾದ ನಂತರ,) ಸೀತೆಯನ್ನು ಆತ್ಮಹನನಕೆ ಬಿಡುವುದಕ್ಕಿಂತ ರಾಮನ ಆಜ್ಞೆಗೆ ಅವಿಧೇಯನಾಗುವುದೇ ಮೇಲು ಎಂದೆಣಿಸಿ ಬಹು ಭಾರವಾದ ಹೃದಯದಿಂದ ಹೊರಟ. ಆದರೂ ರಾಮನಿಂದ ದೂಷಣೆಗೆ ಗುರಿಯಾಗುವುದನ್ನು ತಪ್ಪಿಸಿಕೊಳ್ಳಲಾಗಲಿಲ್ಲ!

ಸೀತೆಯನ್ನು ಕಳೆದುಕೊಂಡ ರಾಮನು ಇನ್ನಿಲ್ಲದಂತೆ ಹಲುಬ ತೊಡಗಿದಾಗ, ಅವನನ್ನು ತನ್ನ ವಿವೇಚನಾಯುಕ್ತ ಆಪ್ತವಾಕ್ಯಗಳಿಂದ ಸಂದರ್ಭಕ್ಕೆ ತಕ್ಕಂತೆ ಸಮಾಧಾನ ಮಾಡುತ್ತಾ ಅವನಿಗೆ ಆಸರೆಯಾಗಿ ಬಂಡೆಯಂತೆ ನಿಂತವನು ಲಕ್ಷ್ಮಣ.

ರಾಕ್ಷಸರೊಂದಿಗೆ ಯುದ್ಧ ಆರಂಭವಾದಾಗ, ಲಕ್ಷ್ಮಣನು ತನ್ನ ಜೀವದ ಹಂಗು ತೊರೆದು ಘೋರವಾಗಿ ಹೋರಾಡಿದ. ರಾಮನು ರಾವಣನನ್ನು ಕೊಂದುದಕ್ಕಿಂತಲೂ ಲಕ್ಷ್ಮಣನು ಇಂದ್ರಜಿತ್‌ನ ಮೇಲೆ ವಿಜಯ ಸಾಧಿಸಿದ್ದು ಹೆಚ್ಚೆಂದೇ ಆಗಿನ ಋಷಿಗಳಿಂದ ಪರಿಗಣಿಸಲ್ಪಟ್ಟಿತು.

ಅಗ್ನಿಪ್ರವೇಶಕ್ಕಾಗಿ ಸೀತೆಗೆ ಚಿತೆಯನ್ನು ನಿರ್ಮಿಸಿಕೊಡುವಾಗ, ಅದಕ್ಕೆ ಮೂಕಸಾಕ್ಷಿಯಾಗಿ ನೋಡುತ್ತ ನಿಂತಾಗ, ಅವನ ಮನಸ್ಸಿನ ಭಾವನೆಗಳನ್ನು ವಿವರಿಸುವುದಕ್ಕಿಂತ ಓದುಗರ ಕಲ್ಪನೆಗೆ ಬಿಡುವುದೇ ಒಳ್ಳೆಯದು.

ರಾಮನು ಅಯೋಧ್ಯೆಗೆ ಹಿಂದಿರುಗಿ ಬಂದು ರಾಜನಾಗಿ ಪಟ್ಟಾಭಿಷಿಕ್ತನಾದ ಸಂದರ್ಭದಲ್ಲಿ ಲಕ್ಷ್ಮಣನಿಗೆ ಯುವರಾಜಪಟ್ಟವನ್ನು ಕೊಡಬಯಸಿದ. ರಾಮನ ಸೇವೆಗೆ ಅದು ಅಡ್ಡಿಯಾಗಬಹುದೆಂದು ಲಕ್ಷ್ಮಣನು ಅದನ್ನೊಪ್ಪಿಕೊಳ್ಳಲು ಶುದ್ಧಾಂಗವಾಗಿ ನಿರಾಕರಿಸುತ್ತಾನೆ!

ಸೀತೆಯನ್ನು ಕಾಡಿಗೆ ಬಿಟ್ಟುಬರಬೇಕು ಎಂದು ರಾಮನು ತೀರ್ಮಾನಿಸಿದಾಗ, ಅದನ್ನು ಕಾರ್ಯಗತಗೊಳಿಸಬೇಕಾಗಿ ಬಂದದ್ದು ಬಡಪಾಯಿ ಲಕ್ಷ್ಮಣನೇ. ಅದು ಅವನ ಪಾಲಿಗೆ ನರಕಕ್ಕಿಂತಲೂ ಘೋರವಾಗಿತ್ತು.

ಕಾಲಪುರುಷನೊಂದಿಗೆ ರಾಮನು ಏಕಾಂತದಲ್ಲಿದ್ದಾಗ, ಬೇರಾರನ್ನೂ ಒಳಕ್ಕೆ ಬಿಡದಂತೆ ಕಾವಲಾಗಿರು ಎಂದು ಲಕ್ಷ್ಮಣನನ್ನು ನಿಲ್ಲಿಸಿದ್ದನು. ಶೀಘ್ರಕೋಪಕ್ಕೆ ಹೆಸರಾದ ದೂರ್ವಾಸ ಋಷಿಯು ಆಗ ಅಲ್ಲಿಗೆ ಬಂದು ತಕ್ಷಣವೇ ತನ್ನನ್ನು ರಾಮನ ಬಳಿಗೆ ಕರೆದೊಯ್ಯುವಂತೆ ಒತ್ತಾಯಿಸಿದನು.

ಲಕ್ಷ್ಮಣನಿಗೆ ಈಗ ಇದ್ದುದು ಎರಡೇ ಮಾರ್ಗ: ಒಂದು, ದೂರ್ವಾಸನನ್ನು ತಡೆದು ನಿಲ್ಲಿಸಿ ಅವನ ಕೋಪಕ್ಕೆ ಎಲ್ಲರನ್ನೂ ಈಡುಮಾಡುವುದು. ತಾನು ಸತ್ತರೂ ಚಿಂತೆಯಿಲ್ಲ, ಅಯೋಧ್ಯೆ ನಾಶವಾಗದಿರಲಿ ಎಂದು ಅವನು ಮೊದಲನೆಯ ಮಾರ್ಗವನ್ನು ಆರಿಸಿಕೊಂಡನು.

ರಾಮನು ತನ್ನ ಆಣತಿಯನ್ನು ಮೀರಿದುದಕ್ಕಾಗಿ ತಲೆದಂಡದ ಬದಲಾಗಿ ಲಕ್ಷ್ಮಣನಿಗೆ ದೇಶವನ್ನು ಬಿಟ್ಟು ಹೊರಟುಹೋಗುವಂತೆ ಸೂಚಿಸುತ್ತಾನೆ. ರಾಮನಿಲ್ಲದ ಬದುಕು ತನಗೆ ಬೇಡವೆಂದು ಲಕ್ಷ್ಮಣನು ನೇರವಾಗಿ ಸರಯೂ ನದಿಗೆ ಹೋಗಿ ದೇಹತ್ಯಾಗ ಮಾಡುತ್ತಾನೆ.

– ಸ್ವಾಮಿ ಹರ್ಷಾನಂದರು
ರಾಮಕೃಷ್ಣಮಠ, ಬೆಂಗಳೂರು

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-04-2025 Date of Posting 20th or 21st of every month Posted at Periodical Rate

# ಚಿತ್ರ ಸುದ್ದಿ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ 'ಎಸ್ಎಸ್ಎಲ್ಸಿ' ಪರೀಕ್ಷೆಯನ್ನು ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ಧಾರವಾಡ ಕೆ ಇ ಬೋರ್ಡ್ ಸೆಂಟ್ರಲ್ ಸ್ಕೂಲ್‌ನಲ್ಲಿ ಆತ್ಮೀಯವಾಗಿ ಸ್ವಾಗತಸಿ ಶುಭ ಕೋರಲಾಯಿತು. ಈ ಸಂದರ್ಭದಲ್ಲಿ ಧಾರವಾಡ ಟ್ಯುಟೋರಿಯಲ್ಸ್ ಅಸೋಸಿಯೇಷನ್ ಅಧ್ಯಕ್ಷರಾದ ಪ್ರೊ ನಾಗೇಶ್ ಅಣ್ಣಿಗೇರಿ, ಕಾರ್ಯಕ್ರಮದ ಸಂಚಾಲಕರಾದ ಶ್ರೀ ವಿನಾಯಕ್ ಜೋಶಿ, ಶ್ರೀ ಸುಧೀಂದ್ರ ದೇಶಪಾಂಡೆ, ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನೀರ್ಸ್, ಲೋಕಲ್ ಸೆಂಟರ್ ಧಾರವಾಡ ಅಧ್ಯಕ್ಷರಾದ ಶ್ರೀ ಸುನಿಲ್ ಬಾಗೇವಾಡಿ, ಕಾರ್ಪೊರೇಟರ್ ಶ್ರೀ ವಿಷ್ಣು ಕೊಲ್ಲಹಳ್ಳಿ,ಸುಭೋದ ಶಿಕ್ಷಣ ಸಮಿತಿ ಅಧ್ಯಕ್ಷರಾದ ಶ್ರೀ ಗಿರಿಧರ್ ಕಿನ್ನಾಳ, ಕೆ ಈ ಬೋರ್ಡ್ ಸಂಸ್ಥೆಯ ಕಾರ್ಯದರ್ಶಿ ಶ್ರೀ ರಾಜ ಪುರೋಹಿತ್, ಶ್ರೀ ರಮೇಶ ಚನ್ನಣ್ಣವರ ಉಪಸ್ಥಿತರಿದ್ದರು.







ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಹುಬ್ಬಳ್ಳಿ ನಗರದ ಕನಕದಾಸ ಶಿಕ್ಷಣ ಸಮಿತಿಯ ವಿಜಯನಗರ ಪಿ.ಯು ಕಾಲೇಜಿನಲ್ಲಿ ಆರಂಭವಾದ ದ್ವಿತೀಯ ಪಿಯು ಪರೀಕ್ಷೆಗೆ ಗುಲಾಬಿ ಹೂ ನೀಡುವುದರ ಮೂಲಕ ವಿದ್ಯಾರ್ಥಿಗಳನ್ನು ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಶ್ರೀ ರವೀಂದ್ರನಾಥ ದಂಡಿನ, ಉದ್ಯಮಿಗಳಾದ ಶ್ರೀ ಬಸವರಾಜ ಬಿಂಗಿ, ಶಿಕ್ಷಣ ತಜ್ಞರಾದ ಶ್ರೀನಿವಾಸ ಕುಲಕರ್ಣಿ, ಪ್ರಾಚಾರ್ಯ ಸಂದೀಪ ಬೂದಿಹಾಳ ಮತ್ತು ಇತರರು ಉಪಸ್ಥಿತರಿದ್ದರು.

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಜನಾರ್ಧನ್ ಎಂ ಎಸ್ ಗಣಿತ ಶಿಕ್ಷಕರಾಗಿ 35 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿದ್ದರು. ಸದಾ ಹಸನ್ಮುಖಿಯಾಗಿ ಸಂಘದ ಚಟುವಟಿಕೆಯಲ್ಲಿ ಭಾಗವಹಿಸುವ ಕಾರ್ಯಕರ್ತರಾಗಿದ್ದರು. ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿ, ಉತ್ತರ ಜಿಲ್ಲೆಯ ಪ್ರಧಾನಕಾರ್ಯದರ್ಶಿಯಾಗಿ ನಿವೃತ್ತಿಯ ನಂತರ ಸಂಘಟನಾ ಕಾರ್ಯದರ್ಶಿಯಾಗಿ ಕಾರ್ಯವನ್ನು ನಿರ್ವಹಿಸಿದವರು. ಸಂಘದ ಪ್ರಮುಖರು ಹಾಗೂ ಕಾರ್ಯಕರ್ತರ ಜೊತೆಯಲ್ಲಿ ಉತ್ತಮ ಒಡನಾಟ ಹೊಂದಿದವರಾಗಿದ್ದರು. ಸಂಘದ ಹಿರಿಯ ಕಾರ್ಯಕರ್ತರಾಗಿದ್ದರೂ, ಯಾವುದೇ ಹಮ್ಮು, ಬಿಮ್ಮುಗಳಿಲ್ಲದೆ ಎಲ್ಲರ ಜೊತೆಯಲ್ಲಿ ಬೆರೆತು ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಶ್ರೀಯತ ಕೃ. ನರಹರಿಯವರು ವಿಧಾನಪರಿಷತ್ ಸದಸ್ಯರಾಗಿದ್ದಾಗ ಅವರ ಜೊತೆಯಲ್ಲಿ ಇದ್ದು ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಸಹಾಯವನ್ನು ಮಾಡುತ್ತಿದ್ದರು. ಬೆಂಗಳೂರು ಉತ್ತರ ಜಿಲ್ಲೆಯ ಪ್ರತಿಭಾ ಪುರಸ್ಕಾರ ಮತ್ತು ಇನ್ನಿತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗುತ್ತಿದ್ದರು. ಸಂಘದ ಸಭೆಗಳಲ್ಲಿ ಎಲ್ಲರಿಗೂ ಉಪಹಾರ, ಊಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಜಬಾಬ್ದಾರಿ ಇವರದಾಗಿತ್ತು.

ಶ್ರೀಯುತರ ಅಗಲಿಕೆ ಮಾಧ್ಯಮಿಕ ಶಿಕ್ಷಕ ಸಂಘಕ್ಕೆ ತುಂಬಲಾರದ ನಷ್ಟ. ಇವರಿಗೆ ಮಾಧ್ಯಮಿಕ ಶಿಕ್ಷಕ ಸಂಘವು ಭಾವಪೂರ್ಣ ನಮನಗಳನ್ನು ಸಲ್ಲಿಸುತ್ತದೆ.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com